ಮೈಸೂರ ಗಿಜಿಟ್ಟು.

ನಂ. 46 ಸರ್ಕಾರದಿಂದ ಪಾಯಿಷ್ ಆದ್ದು. ಸ್ಯ 1884.

ಬೆಂಗಳೂರು, ಶನಿವಾರ, ನವೆಂಬರ್ ತಾ|| 15, ಸ್ಯ 1884.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜ್‌ರಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್‌ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್‌ಸೂಪರ್‌ಟೆಂಡೆಂಟರು, ಫಾರೆಸ್ಟ್ರು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟ್‌ಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಲಾಲ್‌ಬಾಗಿನೊಳು ಫಲಪುಷ್ಪಾದಿಗಳನ್ನು ತೋರಿಸುವಿಕೆಯ ಇನಾಮಿನ ಪಟ್ಟಿ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ಮೊಕ್ತಾಂ ಮೈಸೂರು, ತಾರೀಖು 16ನೇ ಅಕ್ಟೋಬರ್ 1884.

ನಂ. 148.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಉತ್ಪತ್ತೀ ಬಾಬತು ಗಂಧದ ಮರದ ಸಾಲೀಯನಾ ಪರಾಜ್‌ಗಳು ಇದರಡೀಕಂಡ ತಾರೀಖು ವ ಸ್ಥಳಗಳಲ್ಲಿ ಆಯಾ ಡಿಸ್ಟ್ರಿಕ್ಟಿನ ಡಿ|| ಕಮ್ಮಿಷನರ್ ವ ಫಾರೆಸ್ಟ್ರು ಆಫೀಸರ್‌ಗಳಿಂದ ನಡಿಸಲ್ಪಡುತ್ತೆ:—

		ಸ್ವಲ್ಪ ಹೆಚ್ಚು ಕಡಿಮೆಯಾಗಿ ಟನ್‌ಗಳು.
ಶ್ರೀರಂಗಪಟ್ಟಣ, ತಾರೀಖು 1ನೇ ಡಿಸೆಂಬರ್ 1884		
ಹುಣಸೂರು, ತಾರೀಖು 4ನೇ ಡಿಟೋ	,,	500
ಬೆಂಗಳೂರು, ತಾರೀಖು 8ನೇ ಡಿಟೋ	,,	280
ಸೊರಬ, ತಾರೀಖು 13ನೇ ಡಿಟೋ	,,	200
ಅನಂತಪುರ, ತಾರೀಖು 18ನೇ ಡಿಟೋ	,,	200
ಶಿವಮೊಗ್ಗಾ, ತಾರೀಖು 22ನೇ ಡಿಟೋ	,,	500
ತೀರ್ಥಹಳ್ಳಿ, ತಾರೀಖು 7ನೇ ಜನವರೀ 1885	,,	200
ಚಿಕ್ಕಮಗಳೂರು, ತಾ|| 14ನೇ ಡಿಟೋ	,,	200
ಹಾಸನ, ತಾರೀಖು 21ನೇ ಡಿಟೋ	,,	400

ಹರಾಜಿನ ಪರತ್ತುಗಳು.—ಸ್ ೧೮೭೪ನೇ ಇಸವಿ ಡಿಸಂಬರ್ 5ನೇ ಮುಕ್ತಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘೋಷಿಸಿದ್ದಾ ಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ಘೋಷಿಸಲಾಗುವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪಾವತೀ ಬಗ್ಗೆ ವಾಯಿದೆಯು; 1885ನೇ ಇಸವೀ ಮಾರ್ಚ್ 25ನೇ ತಾರೀಖಿಗೆ ಆಖೈರಾಗುವದು.

ನಂ. 159.—ಟೆಲಿಗ್ರಾಫ್ ಮನಿಆರ್ಡರಸ್ ಯಾನೆ ತಂತೀ ಮೂಲಕ ಕಳುಹಿಸಲ್ಪಡುವ ಮನಿ ಆರ್ಡರ್‌ಸಿಗೆ ಸಂಬಂಧಪಟ್ಟ ಯಿದರ ೀ ಕಂಡ ಪೋಸ್ಟಲ್ ನೋಟೀಸು, ಯಿಂಡ್ಯ ದೇಶದ ಪೋಸ್ಟ್ ಆಫೀಸಿನ ಡೈರೆಕ್ಟರ್ ಜನರಲ್ ಯವರಿಂದ ಕೊಡಲ್ಪಟ್ಟ್ಯು, ಸರ್ವರ ತಿಳುವಳಿಕೆ ಬಗ್ಗೆ ಪುನಃ ಪ್ರಕಟಿಸಲ್ಪಡುತ್ತೆ.

ಪೋಸ್ಟಲ್ ನೋಟೀಸು—ಟೆಲಿಗ್ರಾಫ್ ಮನಿ ಆರ್ಡರ್‌ಗಳು.

ಸ್ ೧೮೮೪ನೇ ಇಸವಿ ಅಕ್ಟೋಬರ್ 1ನೇ ತಾರೀಖು ಲಾಗಾಯ್ತು, ಟೆಲಿಗ್ರಾಫ್ ಮನಿ ಆರ್ಡರ್‌ಗಳು ಯಲ್ಲ ಮನಿ ಆರ್ಡರ್ ಆಫೀಸುಗಳಲ್ಲೂ ಪಡೆಯಬಹುದು.

2. ಟೆಲಿಗ್ರಾಫ್ ಮನಿ ಆರ್ಡರ್ ಅಂದರೆ ಪೋಸ್ಟ್ ಆಫೀಸ್ ಮೂಲಕ ಬಂದು ಮೊಬಲಗಿನ ಪಾವತೀ ಬಗ್ಗೆ ಪೋಸ್ಟ್ ಆಫೀಸಿನಿಂದ ಕೊಡಲ್ಪಡುವ ಆರ್ಡರ್; ಹಣ ಪಾವತೀ ಅಂಕವು ಬಂದು ಪೋಸ್ಟ್‌ಆಫೀಸಿನಿಂದ ಮತ್ತೊಂದು ಪೋಸ್ಟ್‌ಆಫೀಸಿಗೆ ತಂತೀ ವರ್ತಮಾನ ಕೊಡಲ್ಪಟ್ಟು ಮೊಬಲಗು ಸಲ್ಲಬೇಕಾದ ಮನುಷ್ಯನ ವಾಸಸ್ಥಾನದಲ್ಲೇ ಹಣ ಪಾವತೀ ಮಾಡಲ್ಪಡುವದು. ಟೆಲಿಗ್ರಾಫ್ ಮನಿ ಆರ್ಡರುಗಳಿಗೆ ಯಾವ ಮನಿ ಆರ್ಡರ್ ಆಫೀಸಿನಲ್ಲಾಗಲಿ ಹಣ ಪಾವತೀ ಮಾಡಲ್ಪಡುವದು.

3. ಮನಿ ಆರ್ಡರು ಕೊಡಲ್ಪಡಬೇಕಾದ ಸ್ಥಳದಲ್ಲಿ ಗವರ್ಮೆಂಟ್* ಟೆಲಿಗ್ರಾಫ್ ಆಫೀಸು ಯಿಲ್ಲದ ಪಕ್ಷಕ್ಕೆ, ಆರ್ಡರು ಮುಂದಕ್ಕೆ ಟೆಲಿಗ್ರಾಫ್ ಮೂಲಕ ಕಳುಹಿಸಲ್ಪಡತಕ್ಕ ಬಗ್ಗೆ ಅತ್ಯಂತ ಸಮೀಪವಾದ ಗವರ್ಮೆಂಟ್ ಟೆಲಿಗ್ರಾಫ್ ಆಫೀಸಿಗೆ ಟಪ್ಪಾಲ್ ಮೂಲಕ ಕಳುಹಿಸಲ್ಪಡತಕ್ಕದ್ದು. ಹಣ ಪಾವತೀ ಮಾಡಲ್ಪಡಬೇಕಾದ ಸ್ಥಳದಲ್ಲಿ ಗವರ್ಮೆಂಟ್ ಟೆಲಿಗ್ರಾಫ್ ಆಫೀಸು ಯಿಲ್ಲದಿದ್ದರೆ, ಆರ್ಡರು ಅತ್ಯಂತ ಸಮೀಪವಾದ ಗವರ್ಮೆಂಟ್ ಟೆಲಿಗ್ರಾಫ್ ಆಫೀಸಿನಿಂದ ಟಪ್ಪಾಲ್ ಮೂಲಕ ಕಳುಹಿಸಲ್ಪಡತಕ್ಕದ್ದು.

*(ಗಾರೆಂಟಿ ಯಾನೆ ಭರವಸೆ ಕೊಡಲ್ಪಟ್ಟ ಯಾ ಸಂಸ್ಥಾನದ) ರೇಲ್ವೆ ಟೆಲಿಗ್ರಾಫ್ ಆಫೀಸುಗಳು, ಈ ರೂಲ್ಸಿನ ಅರ್ಥ ರೀತ್ಯ ಗವರ್ಮೆಂಟ್ ಟೆಲಿಗ್ರಾಫ್ ಆಫೀಸ್‌ಗಳಲ್ಲವು.

4. ಟೆಲಿಗ್ರಾಫ್ ಮನಿ ಆರ್ಡರ್‌ಗಳ ಮೇಲೆ ಕೊಡಲ್ಪಡಬೇಕಾದ ರುಸುಮಿನ ದರಗಳು ಇದರಡೀಕಂಡ ಪ್ರಕಾರ ಯಿರತಕ್ಕವು:—

								ರೂ.	ಆ.
ಮೊಬಲಗು	ರೂಪಾಯಿ	25ಕ್ಕೆ	ಮೇಲ್ಪಡದೆ	ಯಿದ್ದರೆ	..	..	..	0	8
ಡಿಟೋ	ರೂಪಾಯಿ	25ಕ್ಕೆ	ಮೇಲ್ಪಟ್ಟು	ರೂಪಾಯಿ 50ಕ್ಕೆ	ಮೇಲ್ಪಡದೆ	ಇದ್ದರೆ	..	0	12
ಡಿಟೋ	ರೂಪಾಯಿ	50ಕ್ಕೆ	ಮೇಲ್ಪಟ್ಟು	ರೂ. 75ಕ್ಕೆ	ಮೇಲ್ಪಡದೆ	ಇದ್ದರೆ	..	1	2
ಡಿಟೋ	ರೂಪಾಯಿ	75ಕ್ಕೆ	ಮೇಲ್ಪಟ್ಟು	ರೂ. 100ಕ್ಕೆ	ಮೇಲ್ಪಡದೆ	ಇದ್ದರೆ	..	1	8
ಡಿಟೋ	ರೂಪಾಯಿ	100ಕ್ಕೆ	ಮೇಲ್ಪಟ್ಟು	ರೂ. 125ಕ್ಕೆ	ಮೇಲ್ಪಡದೆ	ಇದ್ದರೆ	..	1	14
ಡಿಟೋ	ರೂಪಾಯಿ	125ಕ್ಕೆ	ಮೇಲ್ಪಟ್ಟು	ರೂ. 150ಕ್ಕೆ	ಮೇಲ್ಪಡದೆ	ಇದ್ದರೆ	..	2	4

5. ಹಣ ಪಾವತೀ ಬಗ್ಗೆ ಕೊಡಲ್ಪಡುವ ತಂತೀ ವರ್ತಮಾನಕ್ಕೋಸ್ಕರ, ಕಳುಹಿಸಲ್ಪಡುವ ಹಣದ ಮೊತ್ತವು ಗಣನೆ ಮಾಡದೆ ಪರಂತು ಪಬ್ಲ ಮನುಷ್ಯನಿಗೆ ಪಾವತೀ ಮಾಡಲ್ಪಡೆಬೇಕಾದ ಮೊಬಲಗು 600 ರೂಪಾಯಿಗಳಿಗಿಂತ ಮಿಗಾದೆ ಯಿದ್ದರೆ, ಯರಡು ರೂಪಾಯಿ ಯೇಕರೀತಿ ಚಾರ್ಜ್ ಮಾಡಲ್ಪಡುವದು. ಈ ಟೆಲಿಗ್ರಾಫ್‌ಗಳು "ಜರೂರಾಗಿ" ಕಳುಹಿಸಲ್ಪಡುವವು.

6. ಮನಿ ಆರ್ಡರ್ ಫಾರಮಿಗೆ ಲಗತ್ತು ಯಿರುವ ಕೂರ್ಪಯಾನೆ ಕಾಗದದ ಮೇಲೆ ಹಣ ಕಳುಹಿಸುವವನು ಹಣ ಪಾವತಿಯಾಗುವ ಮನುಷ್ಯನಿಗೆ ತಿಳಿಸಲಪೇಕ್ಷಿಸುವ ಖಾಸಗಿ ವರ್ತಮಾನವನ್ನು ಬರಿಯಬಹುದು. ಅಂಥಾ ಖಾಸಗಿ ವರ್ತಮಾನವು ಹಣ ಪಾವತೀ ಯಾಗುವದಕ್ಕೆ ಕೊಡುವ ಟೆಲಿಗ್ರಾಫ್ ನೊಂದಿಗೆ ಕೇರಿಸಲ್ಪಟ್ಟು ಮಾತು ಬಂಡಕ್ಕೆ 2 ಆಣೆಗಳಂತೆ ಚಾರ್ಜ್ ವಸೂಲ್ಮಾಡಲ್ಪಡುವದು. ಹಣ ಕಳುಹಿಸುವವನು ಟೆಲಿಗ್ರಾಫ್ ಡಿಪಾರ್ಟ್‌ಮೆಂಟಿನ ಚಾಲ್ತಿ ರೂಲ್ಸಿಗಳನುಸರಿಸಿ ಜವಾಬಿನ ಬಗ್ಗೆ ಮುಂದಾಗಿ ಹಣ ಪಾವತೀ ಮಾಡಬಹುದು.

7. ಹಣ ಪಾವತಿಯಾದ ಬಗ್ಗೆ ಟೆಲಿಗ್ರಾಫ್ ಮೂಲಕ ಸರಕಾರಿ ರೀತಿಯನ್ನು ಹಣ ಕಳುಹಿಸುವವನು ಹೊಂದಬಹುದು. ಅಂಥಾ ರೀತಿಬಗ್ಗೆ ಬಂದು ರೂಪಾಯಿ ಚಾರ್ಜ್ ಕೊಡಬೇಕಾಗಿರುತ್ತೆ.

8. ಟೆಲಿಗ್ರಾಫ್ ಮೂಲಕ ಕಳುಹಿಸಲ್ಪಟ್ಟ ಮನಿ ಆರ್ಡರಿನ ಮೊಬಲಗು, ಹಣ ಪಾವತೀ ಮಾಡಬೇಕಾದ ಆಫೀಸಿಗೆ ಟೆಲಿಗ್ರಾಫ್ ವರ್ತಮಾನ ತಲಪಿದ ಪಡನೆ ಅಂಚೇ ಜವಾನನ ಮೂಲಕ ಹಣ ಪಾವತೀಯಾಗಬೇಕಾದ ಮನುಷ್ಯನ ವಾಸಸ್ಥಾನದಲ್ಲಿ ಪಾವತೀ ಮಾಡಲ್ಪಡುವದು. ಹಣದ ಸಂಗಡ ತಂತೀ ವರ್ತಮಾನದ ಬಂದು ನಕಲು ಹಣ ಪಾವತೀ ಮಾಡಲ್ಪಡುವ ಮನುಷ್ಯನಿಗೆ ಕೊಡಲ್ಪಡುವದು.

9. ಈ ತಪಶೀಲ್ ಕಂಡ ರೂಲ್‌ಸಿನ ಕಾಪಿಯು, ಪೋಸ್ಟ್ ಆಫೀಸಿಗೆ ದರಖಾಸ್ತು ಮಾಡಿ ಪಡೆಯಬಹುದು.

ತಾರೀಖು 30ನೇ ಅಕ್ಟೋಬರ್ 1884.

ನಂ. 163.—ಸ್ಯ 1882ನೇ ಇಸವಿ ಡಿಸಂಬರ್ 9ನೇ ಮುಕ್ತಂ 147ನೇ ನಂಬರ್ ಇಸ್ತಿಹಾರ್ ನಾಮೆಯನ್ನು ಬದಲಾಯಿಸುವದರಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು ಹುಕುಂ ಮಾಡಲ್ಪಟ್ಟಿರುತ್ತೆ:—

(1) ಅನೆಕಲ್ ತಾಲ್ಲೂಕಿನಿಂದ ಕಾರ್ಯಕಾರ್ಯಹಳ್ಳೀ ತಾಲ್ಲೂಕಿಗೆ.

ಸೋಮನಹಳ್ಳಿ ಹೋಬಳಿ.

1 ಸೋಮನಹಳ್ಳಿ ..	7 ಹನುಮಂತಪುರ ..	13 ಪೊಗಿಜೂಡಹಳ್ಳಿ
2 ಅಲಕಬಳಲು ..	8 ರಾವಗೊಡ್ಲು ..	14 ಕಾಯಂಗುತ್ತಾ ತಾರಲು
3 ತಾಟಕುಪ್ಪೆ (ಬೇಚರಾಕ್) ..	9 ಗಬ್ಬಾಡಿ ..	15 ಕಾಯಂಗುತ್ತಾ ಗುಲಕಮಲೆ
4 ವಡ್ಡರಪಾಳ್ಯ ..	10 ಕಗ್ಗಲಹಳ್ಳಿ ..	16 ಡಿಟೋ ನೆಲಗುಳಿ
5 ಮುಕ್ಕೊಪ್ಲು ..	11 ಯಡಮುಡ ..	17 ಡಿಟೋ ಚೂಡಹಳ್ಳಿ
6 ಸುಂಕದಕಟ್ಟೆ (ಬೇಚರಾಕ್) ..	12 ನೆತ್ತಿಗೆರೆ ..	

ಹಾರೋಹಳ್ಳಿ ಹೋಬಳಿ.

18 ಹಾರೋಹಳ್ಳಿ ..	27 ಕೃಷ್ಣಕೋಲಹಳ್ಳಿ ..	35 ಹುಲಗೊಂಡಹಳ್ಳಿ
19 ಕೋಣಸಂದ್ರ ..	28 ಭೀವಸಂದ್ರ ..	36 ಗಾರೆ ಪಾಳ್ಯ (ಬೇಚರಾಕ್)
20 ತಾಟಕೆರೆ ..	29 ಬನವಾಸಿ ..	37 ಮೇದವಾರನಹಳ್ಳಿ
21 ಮೂಡೇನಹಳ್ಳಿ ..	30 ಗೊಟ್ಟಿಗೆಹಳ್ಳಿ ..	38 ಹೊಸಕೋಟೆ
22 ಅತ್ತಿಕುಪ್ಪ ..	31 ಬಲಗನಕುಪ್ಪೆ ..	39 ವಡೇರಹಳ್ಳಿ
23 ಕೊಳಲಗೊಂದಿ ..	32 ದೇವಸಂದ್ರ ..	40 ವಾರಸಂದ್ರ
24 ಕಳ್ಳನಕುಪ್ಪೆ ..	33 ಮಣಿಯಂಬಾಳು (ಬೇಚರಾಕ್) ..	41 ವಾರಲಗೆರೆ
25 ಜಕ್ಕಸಂದ್ರ ..	34 ಯರ್ರಹಳ್ಳಿ ..	42 ದ್ಯಾವರ ಕಗ್ಗಲಹಳ್ಳಿ
26 ಗಡವನಹಳ್ಳಿ ..		

(2) ಬೆಂಗಳೂರು ತಾಲ್ಲೂಕಿನಿಂದ ಕಾನಕಾರ್ಯಹಳ್ಳಿ ತಾಲ್ಲೂಕಿಗೆ.

1 ಹುತ್ತಿ ..	2 ನಾಗನಾಯಕನಹಳ್ಳಿ ..	3 ಕಗ್ಗಿಪುರ (ಸರ್ವಮಾನ್ಯ)

(3) ಬೆಂಗಳೂರು ಡಿಸ್ಟ್ರಿಕ್ಟು, ಹೊಸಕೋಟೆ ತಾಲ್ಲೂಕು, ಚನ್ನರಾಯಪಟ್ಟಣದ ಹೋಬಳಿಯಿಂದ ಕೋಲಾರ ಡಿಸ್ಟ್ರಿಕ್ಟು, ಬಿಕ್ಕಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ಹೋಬಳಿಗೆ.

1 ಹಾರಲೂರು ..	6 ಯಲಿಯೂರು ..	10 ಗಡ್ಡದನಾಗನಹಳ್ಳಿ
2 ಬೊಮ್ಮನಹಳ್ಳಿ ..	7 ಗೋಕೆರೆ ಬಾಚಹಳ್ಳಿ ..	11 ಅಗಳಕೋಟೆ
3 ಚೆನ್ನಹಳ್ಳಿ ..	8 ದೊಡ್ಡ ತಟ್ಟುವಂಗಲ ..	12 ವೊಟ್ಟಬೂರಲು
4 ಸೋಲನಹಳ್ಳಿ ..	9 ತಿಮ್ಮನಹಳ್ಳಿ ..	13 ಚಿಕ್ಕರಾಮನಹಳ್ಳಿ
5 ಮಂಡೆಪಲೆ ..		

ತಾರೀಖು 4ನೇ ನವಂಬರ್ 1884.

ನಂ. 164.—ಸ್ಯ 1883ನೇ ಇಸವಿ ಮಾರ್ಚೀ 5ನೇ ಮತ್ತು ಂ 65ನೇ ನಂಬರ್ ಇಸ್ತಿಹಾರ್ ನಾಮೆಯನ್ನು ತಿದ್ದುಪಡಿಮಾಡಿ, ಚನ್ನಪಟ್ಟಣದ ಡೆಪ್ಯುಟಿ ಅಮಲ್‌ದಾರ್ರ ಛಾರ್ಜಿನ ಬಂದು ಭಾಗವಾಗಿದ್ದ ಪಿರುವಾಕ್ಷಿಪುರ ವ ಹೊಂಗನೂರ ಹೋಬಳಿಗಳು, ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ರ ಅಧಿಕಾರಕ್ಕೆ ಇದರಿಂದ ವರ್ಗಮಾಡಲ್ಪಟ್ಟಿರುತ್ತೆ.

ತಾರೀಖು 5ನೇ ನವಂಬರ್ 1884.

ನಂ. 165.—ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಇ. ಸಿ. ಷಣ್ಮುಗವೇಲು ಪಿಳ್ಳೆಯವರಿಗೆ, 1884ನೇ ಇಸವಿ ಅಕ್ಟೋಬರ್ 20ನೇ ಮತ್ತು ಂ 150ನೇ ನಂಬರ್ ಈ ಆಫೀಸ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾಕ್ಕೆ ಜಾಸ್ತಿಯಾಗಿ 4 ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 8ನೇ ನವಂಬರ್ 1884.

ನಂ. 166.—ಹಾರ್ಸ್ ಸಬ್ ಡಿವೀಜ್ ಇಂಪ್ರೂವ್‌ಮೆಂಟ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಟಿ. ಆನಂದರಾಯರಿಗೆ, 1884ನೇ ಇಸವಿ ಅಕ್ಟೋಬರ್ 6ನೇ ಮತ್ತು ಂ 145ನೇ ನಂಬರ್ ಈ ಆಫೀಸ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ರಜಾಕ್ಕೆ ಜಾಸ್ತಿಯಾಗಿ ಒಂದು ತಿಂಗಳ ಪಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 167.—ಸೂಪರ್ ನ್ಯೂಮರೇರಿ ಸಬಾರ್ಡಿನೇಟ್ ಜಡ್ಜ್ ಮೆ|| ಬಿ. ತಿರುಮಲಾಚಾರ್ರು, ಒಬ್ಬ ರೆವಿನ್ಯು ಅಸಿಸ್ಟೆಂಟ್ ಕಮ್ಮಿಷನರ್ ಅಧಿಕಾರಗಳು ಕೊಡಲ್ಪಟ್ಟು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ತಾರೀಖು 21ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ಬೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅಜ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬವೋಜೇಬ' ಹುಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.